## ವಾರ್ತಾ ವಿಶ್ಲೇಷಣೆ

### ಕದಿಯುವ ಖಾಯಿಲೆ

**ಕ**ದಿಯುವವರೆಲ್ಲ ನಿಜವಾದ ಕಳ್ಳರಲ್ಲ, ಕಳ್ಳರೆಲ್ಲ ನಿಜವಾದ ಅಪರಾಧಿಗಳಲ್ಲ. ಕದಿಯುವವರಲ್ಲಿ ಅನೇಕ ಬಗೆ. ಕೆಲವರು ದರೋಡೆಕೋರರು, ಕೆಲವರು ಸಣ್ಣಪುಟ್ಟದ್ದನ್ನು ಕದಿಯುವ ಚಿಲ್ಲರೆ ವ್ಯಾಪಾರಿಗಳು, ಸುಸಂಸ್ಕೃತವಾಗಿ ಕದಿಯುವ ಲಂಚಕೋರರು, ಯಾವ ಶಿಕ್ಷೆಗೂ ಒಳಪಡದಂತೆ ಕದಿಯುವ ಜಾಣಕಳ್ಳರು, ಕೂತಲ್ಲಿಯೇ ಇತರರ ಹಣ ತಮ್ಮ ಬೊಕ್ಕಸಕ್ಕೆ ಬಂದು ಬೀಳುವಂತೆ ಮಾಡುವ ವ್ಯವಹಾರತಜ್ಞರು, ಮುಗ್ಧ ಭಕ್ತರನ್ನು ಮರುಳುಮಾಡಿ ಅವರಿಂದ ಹಣ ದೋಚುವ ಕಳ್ಳ ಗುರುಗಳು—ಹೀಗೆ ಅನೇಕ ಬಗೆಯ ಕಳ್ಳರಿದ್ದಾರೆ. ಆದರೆ ಇನ್ನೊಂದು ಬಗೆಯ ಕಳ್ಳರಿದ್ದಾರೆ—ಅವರು ಇವರೆಲ್ಲರಿಗಿಂತ ವಿಶಿಷ್ಟ. ಇವರೆಲ್ಲ ಧನದಾಸೆಯಿಂದ ಕದಿಯುತ್ತಾರೆ. ಆದರೆ ಈ ವಿಶಿಷ್ಟ ವರ್ಗದ ಕಳ್ಳರಿಗೆ ಧನದಾಸೆಯಿಲ್ಲ, ಯಾವುದೇ ವಸ್ತುಗಳ ಆಸೆಯೂ ಇಲ್ಲ. ಅವರು ಕದಿಯುವುದಕ್ಕಾಗಿಯೇ ಕದಿಯುತ್ತಾರೆ—ನಿಷ್ಕಾಮ ಕರ್ಮಯೋಗಿಗಳಲ್ಲವೆ?

ಅವರನ್ನು ಇಂಗ್ಲಿಷ್‌ನಲ್ಲಿ ಕ್ಲೆಪ್ಟೋಮ್ಯಾನಿಯಾಕ್ಸ್ (Kleptomaniacs) ಎಂದು ಕರೆಯುತ್ತಾರೆ. ಕನ್ನಡದಲ್ಲಿ ಅವರನ್ನು ಸ್ತೇಯೋನ್ಮತ್ತರು ಎಂದು ಕರೆಯಬಹುದೇನೊ. ಅವರಿಗೆ ಕದಿಯುವ ವಸ್ತು ಮುಖ್ಯವಲ್ಲ, ಕದಿಯುವ ಕ್ರಿಯೆ. ಅವರು ಕದ್ದ ವಸ್ತುಗಳನ್ನು ಇಟ್ಟುಕೊಳ್ಳುವುದೂ ಇಲ್ಲವಂತೆ. ಅನೇಕ ವೇಳೆ ಅವರು ಕದ್ದದ್ದನ್ನು ಬಿಸಾಕುತ್ತಾರೆ ಅಥವಾ ನಾಶಮಾಡುತ್ತಾರೆ. ಅವರಿಗೆ ಒಳಗಿನಿಂದಲೇ ಕದಿಯಬೇಕೆಂಬ ಪ್ರೇರಣೆಯುಂಟಾಗುತ್ತದಂತೆ. ಹೊರಗಿನ ವಸ್ತು ಅವರನ್ನು ಆಕರ್ಷಿಸುವುದಿಲ್ಲ, ಮತ್ತು ಯಾವುದಾದರೂ ಕೊರತೆಯೂ ಅವರನ್ನು ಕದಿಯುವಂತೆ ಪ್ರಚೋದಿಸುವುದಿಲ್ಲ. ಯಾವ ಸಾಮಾಜಿಕ ಒತ್ತಡವೂ ಅದಕ್ಕೆ ಕಾರಣವಲ್ಲ. ಅವರಿಗೆ ಕದಿಯುವುದರಲ್ಲಿಯೇ ಒಂದು ಆನಂದ, ಅದೇ ಒಂದು ಸಾಹಸ. ಬಹುಶಃ ಚಿಕ್ಕಂದಿನಿಂದಲೇ ಆ ಅಭ್ಯಾಸವನ್ನು ಬೆಳೆಸಿಕೊಂಡಿರುತ್ತಾರೆ ಎಂದು ಮನಶ್ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಅಮೆರಿಕದಲ್ಲಿ ಅಂಗಡಿಗಳಿಗೆ ನುಗ್ಗಿ ಸಾಮಾನುಗಳನ್ನು ಕದ್ದುಕೊಂಡು ಹೋಗುವವರನ್ನು ಷಾಪ್‌ಲಿಫ್ಟರ್ಸ್ ಎಂದು ಕರೆಯುತ್ತಾರೆ. ಇಂಥವರಲ್ಲಿ ಹೆಚ್ಚಿನವರು ಸ್ತೇಯೋನ್ಮತ್ತರು. ಇವರಿಂದ ಅಮೆರಿಕದಲ್ಲಿ ಬಿಡಿ ವ್ಯಾಪಾರಗಳಿಗೆ (retailers) ೧೦ ಬಿಲಿಯನ್ ಡಾಲರ್ ಪ್ರತಿವರ್ಷ ನಷ್ಟವಾಗುತ್ತಿದೆಯಂತೆ!

❖

### ವಿತ್ತದಿಂದ ವಿಪತ್ತು

**ಚೈ**ನಾದೇಶದ ಆರ್ಥಿಕ ಪ್ರಗತಿಯ ಬಗ್ಗೆ ನಾವು ಸಾಕಷ್ಟು ಕೇಳುತ್ತೇವೆ. ಅವರೊಂದು ಆರ್ಥಿಕ ಪವಾಡವನ್ನೇ ಸಾಧಿಸಿದರು ಎಂದು ಮುಂತಾಗಿ ಓದುತ್ತೇವೆ ಆದರೆ ಈ ಮುಖವಾಡದ ಹಿಂದೆ ಇರುವ ಅಶಾಂತಿಯ ವಿಚಾರ ನಮ್ಮ ಗಮನಕ್ಕೆ ಬರುವುದಿಲ್ಲ. ಭ್ರಷ್ಟಾಚಾರ ಅಧಿಕವಾಗುತ್ತಿದೆ, ಏಡ್ಸ್ ರೋಗ ತನ್ನ ಮೃತ್ಯುಪಾಶವನ್ನು ಎಲ್ಲೆಲ್ಲೂ ಬೀಸುತ್ತಿದೆ. ಬಾಲಾಪರಾಧಿಗಳ ಸಂಖ್ಯೆ ತ್ವರಿತಗತಿಯಲ್ಲಿ ವೃದ್ಧಿಯಾಗುತ್ತಿದೆ. ೧೯೯೭-೨೦೦೦ ವರ್ಷಗಳ ಅವಧಿಯಲ್ಲಿ ೧೮ ವಯಸ್ಸಿನ ಕೆಳಗಿನ ಅಪರಾಧಿಗಳ ಸಂಖ್ಯೆ ದ್ವಿಗುಣಗೊಂಡಿದೆಯಂತೆ. ಅವರು ತಮ್ಮದೇ ಗುಂಪನ್ನು ಕಟ್ಟಿಕೊಂಡು ಹಿಂಸಾಚಾರ, ಅತ್ಯಾಚಾರ, ಕುಡಿತ, ಜೂಜಾಟ ಮುಂತಾದವುಗಳಲ್ಲಿ ತೊಡಗುತ್ತಾರಂತೆ. ಪುರಾತನ ಕನ್‌ಫ್ಯೂಸಿಯನ್ ನೈತಿಕತೆಗೆ ಮತ್ತು ಸಾಮಾಜಿಕ ಮೌಲ್ಯಗಳಿಗೆ ಬೆಲೆಯೇ ಇಲ್ಲದಂತಾಗಿದೆ. ವಾಂಗ್‌ಷೂ (Wang Shuo) ಎಂಬ ಚೈನಾದ ಶ್ರೇಷ್ಠ ಕಾದಂಬರಿಕಾರ ಬರೆಯುತ್ತಾನೆ: "ಭವಿಷ್ಯವನ್ನು ಕುರಿತು ಚಿಂತಿಸಿದಾಗ ನನಗೆ ಭಯವಾಗುತ್ತದೆ. ಆದರೆ ಆಶ್ರಯಕ್ಕಾಗಿ ಯಾವ ಕಡೆ ತಿರುಗಬೇಕೆಂಬುದೇ ತಿಳಿಯುತ್ತಿಲ್ಲ. ಸಂಸ್ಕೃತಿಯೇ ಇಲ್ಲದ ಕಗ್ಗತ್ತಲೆಯ ನಾಡಿನಲ್ಲಿ ನಾನೊಬ್ಬ ಅಸಹಾಯಕ ಏಕಾಂಗಿಯಾಗಿಬಿಟ್ಟಿದ್ದೇನೆ,"(*TIME*, 2002 ನವೆಂಬರ್11, ಪುಟ.71).

ಚೈನಾ ಸರ್ಕಾರವೂ ಕೂಡ ಇದರ ಬಗ್ಗೆ ಗಂಭೀರವಾಗಿ ಚಿಂತಿಸುತ್ತಿರುವಂತೆ ಕಂಡುಬರುತ್ತಿದೆ. ಜನರಿಗೆ ಒಂದು ನಂಬಿಕೆಯ ಆವಶ್ಯಕತೆಯಿದೆಯೆಂಬುದನ್ನು ಅದು ಮನಗಾಣುತ್ತಿದೆ. ಅದು ಈಗ ಧಾರ್ಮಿಕ ನಿರ್ಬಂಧಗಳನ್ನು ಸಡಿಲಗೊಳಿಸುತ್ತಿದೆ. ಕ್ರೈಸ್ತ ಮತ್ತು ಬೌದ್ಧ ಧರ್ಮಗಳು ಈಗ ಅಲ್ಲಿ ಪುನಶ್ಚೇತನಗೊಳ್ಳುತ್ತಿವೆಯಂತೆ. ಜನರು ಹಳೆಯ ಧಾರ್ಮಿಕ ಉತ್ಸವಗಳಲ್ಲಿ ತೊಡಗಲು ಅವಕಾಶ ಕಲ್ಪಿಸಲಾಗಿದೆ. ಕ್ರೈಸ್ತಧರ್ಮ ಅಲ್ಲಿ ಅತ್ಯಂತ ತ್ವರಿತಗತಿಯಲ್ಲಿ ಬೆಳೆಯುತ್ತಿದೆಯಂತೆ. ಪ್ರತಿವರ್ಷವೂ ೨೦ ಲಕ್ಷ ಚೀನಿಯರನ್ನು ಬೇರೆ ಬೇರೆ ಚರ್ಚುಗಳ ಮೂಲಕ ಗೋಪ್ಯವಾಗಿ ಬ್ಯಾಪ್ಟೈಸ್ ಮಾಡಲಾಗುತ್ತಿದೆಯಂತೆ. ಒಟ್ಟು ೫೦ ಮಿಲಿಯನ್ ಚರ್ಚುಗಳು ಚೈನಾದಲ್ಲಿವೆಯಂತೆ.

'ಅರ್ಥ'ಪ್ರಧಾನ ಸಮಾಜದಲ್ಲಿ ಜೀವನವೇ ಅರ್ಥವನ್ನು ಕಳೆದುಕೊಳ್ಳುತ್ತದೆ—'ಅರ್ಥಮನರ್ಥ'ವಾಗುತ್ತದೆ. ಆದ್ದರಿಂದ ಮೌಲ್ಯವಂತ ಜೀವನಕ್ಕೆ ನಾವು ಒತ್ತನ್ನು ನೀಡಬೇಕು. ಅಭ್ಯುದಯ ನಿಃಶ್ರೇಯಸಗಳೆರಡನ್ನೂ ಸಮದೂಗಿಸಿಕೊಂಡು ಹೋಗಬೇಕು.

❖